ಪ್ರಧಾನ  ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ  ಜೆಎಂಎಫ್ ಸಿ ನ್ಯಾಯಾಲಯ
ರಾಣೇಬೆನ್ನೂರು.

ಸಿ.ಸಿ.ಸಂಖ್ಯೆಃ 710/2024

ಪಿ ಡಬ್ಲ್ಯೂಃ 3

ಸಿ ಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ಹನಮಂತಪ್ಪ |
| ತಂದೆಯ ಹೆಸರು | : | ನಾಗಪ್ಪ ರಂಗಣ್ಣನವರ |
| ವಯಸ್ಸು | : | 43 |
| ಉದ್ಯೋಗ | : | ಅಬಕಾರಿ ಮುಖ್ಯಪೇದೆ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕಃ 08-09-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 28-10-2011 ರಿಂದ ದಿನಾಂಕ 11-07-2024 ರ ವರೆಗೆ ಅಬಕಾರಿ ಉಪ ಅಧೀಕ್ಷಕರ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 20-04-2024 ರಂದು ಲೋಕಸಭಾ ಚುನಾವಣೆ ಇದ್ದ ಕಾರಣ ಅಬಕಾರಿ ಅಕ್ರಮಗಳ ಪತ್ತೆಗಾಗಿ ಚಾ ಸಾ 1 ರವರು ಬೆಳಗ್ಗೆ ಸರ್ಕಾರಿ ದ್ವಿಚಕ್ರ ವಾಹನದಲ್ಲಿ ಸಂಖ್ಯೆ ಕೆಎ-27/ಜಿ-529 ರಲ್ಲಿ ರಾಣೇಬೆನ್ನೂರು ಶಹರದಲ್ಲಿ  ಗಸ್ತು ಮಾಡುತ್ತಿದ್ದಾಗ ಬೆಳಗ್ಗೆ 11-10 ಗಂಟೆ ಸಮಯಕ್ಕೆ ಮಾಹಿತಿ ಬಂದ ಮೇರೆಗೆ ಬೆನಕನಕೊಂಡ ಗ್ರಾಮಕ್ಕೆ ಅಕ್ರಮವಾಗಿ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಣಿಕೆ ಆಗುತ್ತಿರುವ ಬಗ್ಗೆ ಮಾಹಿತಿ ಬಂದ ಕೂಡಲೇ ನಾವು ಬೆನಕನಕೊಂಡ ಬ್ರಿಡ್ಜ್ ಕೆಳಗಡೆ ರಸ್ತೆಗಾವಲು ಮಾಡುತ್ತಿದ್ದಾಗ ಅಲ್ಲೇ ಇದ್ದ ಪಂಚರಾದ ಚಾ ಸಾ 2 ಮತ್ತು 3 ರವರನ್ನು ಪಂಚರಾಗಿ ಸಹಕರಿಸಲು ಕೇಳಿ ಒಪ್ಪಿದ ಮೇರೆಗೆ ರಸ್ತೆಗಾವಲು ಮಾಡುತ್ತಿದ್ದಾಗ ಸುಮಾರು 11-30 ಗಂಟೆಗೆ ರಾಣೇಬೆನ್ನೂರು ಕಡೆಯಿಂದ ಬೆನಕನಕೊಂಡ ಗ್ರಾಮಕ್ಕೆ ಹೋಗುವ ಕಡೆಗೆ ದ್ವಿಚಕ್ರ ವಾಹನದ ಮೇಲೆ ಒಬ್ಬ ವ್ಯಕ್ತಿಯು ಪೆಟ್ರೋಲ್ ಟ್ಯಾಂಕಿನ ಮೇಲೆ ಚೀಲ ಇಟ್ಟುಕೊಂಡು ಬರುತ್ತಿರುವುದನ್ನು ನೋಡಿ ಸದರಿ ವ್ಯಕ್ತಿಯನ್ನು ತಡೆದು ಪರಿಶೀಲಿಸಲಾಗಿ ಮದ್ಯದ

ಟೆಟ್ರಾ ಪ್ಯಾಕ್ ಗಳು ಇರುವುದಾಗಿ ತಿಳಿಸಿದ ಮೇರೆಗೆ, ವಿಚಾರಣೆ ಮಾಡಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಚೀಲವನ್ನು ಬಿಚ್ಚಿ ನೋಡಲಾಗಿ ವಿವಿಧ ನಮೂನೆಯ 90 ಮಿಲಿಯ 24 ಹೈವರ್ಡ್ಸ ಚಿಯರ್ಸ ವಿಸ್ಕಿ ಟೆಟ್ರಾ ಪ್ಯಾಕ್ಗಳು, 90 ಮಿಲಿಯ 24 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕ್ ಗಳು ಒಟ್ಟು 4.32 ಲೀಟರ್ ಮದ್ಯ ಇರುವುದು ತಿಳಿದು ಬಂದಿತು. ಸದರಿ ಮದ್ಯವನ್ನು ಎಲ್ಲಿಂದ ತಂದಿರುತ್ತೀರಾ ಎಂದು ಕೇಳಲಾಗಿ ರಾಣೇಬೆನ್ನೂರು ಶಹರದ ಕೆ.ಆರ್. ಬ್ಯಾಡಗಿ ಸಿ.ಎಲ್2 ಸನ್ನದಿನಿಂದ ಬೇರೆ ಬೇರೆ ವ್ಯಕ್ತಿಗಳಿಂದ ಖರೀದಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಹೊಂದಲು ಪಾಸ್ ಪರ್ಮಿಟ್ ಇರುವ ಬಗ್ಗೆ ವಿಚಾರಿಸಲಾಗಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳ ಲೇಬಲ್ ಗಳನ್ನು ಅನುಬಂಧ-1 ರಲ್ಲಿ ಬರೆಯಲಾಯಿತು. ದೊರೆತ ಎಲ್ಲಾ ಮದ್ಯವನ್ನು ದೊರೆತ ಚೀಲದಲ್ಲಿ ಹಾಕಿ ಬಿಳಿಯ ದಾರದಿಂದ ಕಟ್ಟಿ ಇಲಾಖಾ ಸೀಲ್ ಸಂಖ್ಯೆ 566 ರಿಂದ ಸೀಲ್ ಮಾಡಲಾಯಿತು.

2. ನಂತರ ವಾದರಿ ಚೀಟಿ ಮತ್ತು ಮಾದರಿ ಸೀಲ್ ತಯಾರಿಸಿ ಪಂಚರ ಮತ್ತು ಸಿಬ್ಬಂದಿಗಳು ಮತ್ತು ಅಧಿಕಾರಿಗಳ ಸಹಿ ತೆಗೆದುಕೊಳ್ಳಲಾಯಿತು. ಆರೋಪಿಯ ಹೆಸರು ಕರಕಪ್ಪ ಸಿದ್ದಪ್ಪ ಪೂಜಾರ ಎಂದು ತಿಳಿದು ಬಂದಿರುತ್ತದೆ. ವಾಹನವನ್ನು ಪರಿಶೀಲಿಸಲಾಗಿ ಕಪ್ಪು ಕೆಂಪು ಬಣ್ಣ ಮಿಶ್ರಿತ ಹೀರೋ ಸ್ಪ್ಲೆಂಡರ್ ದ್ವಿಚಕ್ರ ವಾಹನ ಸಂಖ್ಯೆ ಕೆಎ-35/ಇಕೆ-5812 ಆಗಿರುತ್ತದೆ. ನಂತರ ವಾಹನ ಮತ್ತು ಮದ್ಯವನ್ನು ವಶಪಡಿಸಿಕೊಂಡು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 11-30 ರಿಂದ 12-30 ರವರೆಗೆ ಜರುಗಿಸಲಾಯಿತು ಮತ್ತು ಪಂಚರ ಸಹಿ ತೆಗೆದುಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ಸ್ವದೂರನ್ನು ದಾಖಲಿಸಿರುತ್ತೇವೆ.

3. ಜಪ್ತುಪಡಿಸಿಕೊಂಡ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ದಿನಾಂಕ 22-05-2024 ರಂದು ಧಾರವಾಡದ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ. ದಿನಾಂಕ 06-06-2024 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಮತ್ತು ಮಾದರಿ ಮುದ್ದೆ ಮಾಲನ್ನು ತೆಗೆದುಕೊಂಡು ಬಂದಿರುತ್ತೇನೆ. ದಿನಾಂಕ 07-06-2024 ರಂದು ಚಾ ಸಾ 6 ರವರಿಗೆ ವರದಿ ನೀಡಿ, ಹೇಳಿಕೆ ನೀಡಿರುತ್ತೇನೆ. ನಿಪಿ 2 ರಲ್ಲಿರುವ ಸಹಿಯನ್ನು ಸಾಕ್ಷಿದಾರರು

ನೋಡಿ ಗುರುತಿಸಿದ ಮೇರೆಗೆ ಸಹಿಯನ್ನು ನಿಪಿ 2ಡಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿ ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ದಿನಾಂಕ 20-04-2024 ರಂದು ಬೆನಕನಕೊಂಡ ಗ್ರಾಮಕ್ಕೆ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುತ್ತಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಸುಳ್ಳು ನುಡಿಯುತ್ತೀರ ಎಂದರೆ ಸರಿಯಲ್ಲ. ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ನುಡಿಯುತ್ತೀರಾ ಎಂದರೆ ಸರಿಯಲ್ಲ. ಆರೋಪಿಯ ದ್ವಿಚಕ್ರ ವಾಹನದ ಮೇಲೆ ಇದ್ದ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ವಶಪಡಿಸಿಕೊಂಡಿರುವುದಾಗಿ ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಮದ್ಯವನ್ನು ವಶಪಡಿಸಿಕೊಂಡಿರುತ್ತೀರಾ ಎಂದು ಸುಳ್ಳು ನುಡಿಯುತ್ತೀರಾ ಎಂದರೆ ಸರಿಯಲ್ಲ. ಬೆಳಗ್ಗೆ 11-30 ರಿಂದ 12-30 ವರೆಗೆ ಪಂಚನಾಮೆ ಜರುಗಿಸಿರುತ್ತೇವೆ ಎಂದು ಸುಳ್ಳು ನುಡಿಯುತ್ತೀರಾ ಎಂದರೆ ಸರಿಯಲ್ಲ. ಆರೋಪಿಯು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. C/c. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.